# ಬ್ಯಾಡ್ ಟಚ್ಚೇ ಗುಡ್ ಅನಿಸಿದರೆ

ಮಕ್ಕಳೊಡನೆ ಹೇಗೆ ವರ್ತಿಸಬೇಕು ಎಂಬ ಬಗ್ಗೆ ದೊಡ್ಡವರಿಗೆ ಪಾಠ ಹೇಳುವುದಕ್ಕೆ ಅವಕಾಶವೊಂದನ್ನು ಸೃಷ್ಟಿಸಬೇಕಾಗಿದೆ.

■ ಸ್ವಯಂಪ್ರಭಾ



ಮಕ್ಕಳ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳು ದೊಡ್ಡ ಸುದ್ದಿಯಾದಾಗಲೆಲ್ಲ, ಎಳೆಯರಿಗೆ ತಿಳಿ ಹೇಳಬೇಕಾದ ವಿಷಯಗಳು ಹಾಗೂ ಕಾಳಜಿ ವಹಿಸಬೇಕಾದ ಸಂಗತಿಗಳ ಬಗೆಗೆ ಬಹಳ ಚರ್ಚೆ ನಡೆಯುತ್ತದೆ. 'ಲೈಂಗಿಕ ದೌರ್ಜನ್ಯದ ಬಗ್ಗೆ ಮಕ್ಕಳಿಗೆ ಸೂಕ್ತ ಮಾಹಿತಿ ನೀಡುವುದು ಅತಿ ಅಗತ್ಯ. ಗುಡ್ ಟಚ್ ಮತ್ತು ಬ್ಯಾಡ್ ಟಚ್ ಯಾವುದೆನ್ನುವುದನ್ನು ಮಕ್ಕಳಿಗೆ ತಿಳಿ ಹೇಳಬೇಕು. ಬ್ಯಾಡ್ ಟಚ್ ವಿರೋಧಿಸಬೇಕು ಎಂಬ ತಿಳಿವಳಿಕೆ ಅವರಲ್ಲಿ ಮೂಡಿಸಬೇಕು' ಎಂಬ ಸಲಹೆಗಳನ್ನು ಕೇಳುತ್ತೇವೆ.

ಮನಸ್ಸು ನಿರ್ಮಲವಾಗಿದ್ದರೆ ಟಚ್ ಎಂಬುದು ಎಷ್ಟೊಂದು ಆಪ್ತವಾದ ಪದ. 'ಹಿ ಟಚ್ಡ್ ಮೈ ಹಾರ್ಟ್' ಎನ್ನುತ್ತೇವೆ. ಆದರೆ, ಹೃದಯವನ್ನು ಸ್ಪರ್ಶಿಸುವುದು ನಿಜಕ್ಕೂ. ಸ್ಪರ್ಶ ಎನ್ನುವುದು ಭಾವನೆಯೋ ಕ್ರಿಯೆಯೋ ಅಲ್ಲ. ಅದು ಶಕ್ತಿ. ಅದಕ್ಕೆ ಅಪಾರ ಸಾಮರ್ಥ್ಯವಿದೆ. ಪದಗಳಿಗೆ ಸ್ಪರ್ಶದ ಶಕ್ತಿ ಬಂದು ಬಿಡುತ್ತದೆ. ನೋಟಕ್ಕೂ ಸ್ಪರ್ಶದ ಶಕ್ತಿ ಲಭಿಸಬಹುದು. ನಮ್ಮ ಒಳಿತಿಗಾಗಿ ಯಾರೋ ಒಂದು ಕೆಲಸ ಮಾಡಿದಾಗ, ಆ ಕ್ರಿಯೆಗೇ ಸ್ಪರ್ಶದ ಶಕ್ತಿ ಬರುತ್ತದೆ. ಜೀವನದಲ್ಲಿ ಕೆಲವೊಮ್ಮೆಯಾದರೂ ಯಾರದೋ ನೆರವಿನ ಹಸ್ತ ನಮ್ಮ ಹಣೆಯನ್ನು ನೇವರಿಸಿದಂತೆ ಭಾಸವಾಗುತ್ತದಲ್ಲವೇ? ಇಷ್ಟೆಲ್ಲ ಗಾಢವಾದ ಛಾಯೆ ಹೊಂದಿರುವ ಸ್ಪರ್ಶ ಸದಾ ಕಾಲಕ್ಕೂ ಉತ್ತಮವಾಗಿರುವುದೆಂದರೆ ಅದು ಮಗುವಿನ ಬಳಿ.

ಮಗುವಿಗೆ ಬ್ಯಾಡ್ ಟಚ್ ಎಂದರೇನೆಂದು ಹೇಳಿಕೊಡುವುದು ತುಂಬಾ ಕಷ್ಟ! ಪುಟಾಣಿ ಮಕ್ಕಳು ತಮ್ಮ ಅಂತರಂಗದ ಧ್ವನಿಯನ್ನು ಆಲಿಸಿಕೊಂಡೇ ಬೆಳೆಯುತ್ತವೆ. ದೊಡ್ಡವರು ಹೇಳುವ ಮಾತಿಗಿಂತಲೂ ನಡೆಯುವ ನಡೆಯನ್ನು ಗಮನಿಸಿಯೇ ಮಕ್ಕಳು ತಮ್ಮ ಧೋರಣೆಯನ್ನು ರೂಪಿಸಿಕೊಳ್ಳುತ್ತವೆ. ಮುದ್ದು ಮಾಡಿಸಿಕೊಂಡು ಬೆಳೆಯುವ ಪುಟಾಣಿಗಳಿಗೆ ಮುದ್ದು ಮಾಡುವ ಕೈಗಳ ಹಿಂದೆ ಕೆಡುಕಿದೆ ಎಂದು ಅರ್ಥಮಾಡಿಸುವುದು ತುಂಬಾ ಕಷ್ಟ. ಹಾಗೆ ಅರ್ಥ ಮಾಡಿಕೊಳ್ಳಲು ಕೆಡುಕಿನ ದೃಷ್ಟಿಕೋನದಿಂದ ಒಮ್ಮೆಯಾದರೂ ಯೋಚನೆ ಮಾಡಬೇಕಾಗುತ್ತದಲ್ಲ. ಹಾಗೆ ಯೋಚನೆ ಮಾಡುವಂತೆ ಮಕ್ಕಳಿಗೆ ಹೇಳಿಕೊಡುವುದು ಅಮ್ಮನ ಮನಸ್ಸಿಗೆ ಸಮಾಧಾನ ಎನಿಸುವುದಿಲ್ಲ. ಆದರದು ಅನಿವಾರ್ಯ. ಅತ್ತ ಬೆಳೆಯುವ ವಯಸ್ಸಿನ ಮಕ್ಕಳ ದೇಹದ ಹಾರ್ಮೋನುಗಳಾದರೂ ಬ್ಯಾಡ್ ಟಚ್ ಅನ್ನು ಅರ್ಥ ಮಾಡಿಸಲು ಬಿಡುತ್ತವೆಯೇ? ಇಲ್ಲಿ ಎರಡು ಸಾಧ್ಯತೆಗಳಿವೆ: ಒಂದು, ಸ್ಪರ್ಶವು ಕೆಟ್ಟದು ಎಂಬುದನ್ನು ಗುರುತಿಸಲಾರದಷ್ಟು ಮಕ್ಕಳು ಪುಟ್ಟವಾಗಿರುತ್ತವೆ. ಎರಡನೆಯದು, ಇಂತಹ ಸ್ಪರ್ಶವೇ ಇಷ್ಟವೆನಿಸುವ ವಯಸ್ಸಿಗೆ ಕಾಲಿರಿಸುವ ಹಂತದಲ್ಲಿರುತ್ತಾರೆ.

ಪಾಲನೆ ಪೋಷಣೆಯ ವ್ಯಾಪ್ತಿಯಲ್ಲಿ ಇಂತಹ ಅಂಶಗಳೂ ಸೂಕ್ಷ್ಮವಾಗಿ ಅಡಕವಾಗಿರುತ್ತವೆ. ಹೋಟೆಲ್‌ನಲ್ಲಿ ತಿಂಡಿ ತಿನ್ನಲು ಕುಳಿತಾಗ, ಕೈ ತೊಳೆಯಲು ಮಗು ವಾಷ್ ಬೇಸಿನ್‌ಗೆ ಓಡಿದರೆ, ಅಮ್ಮನೂ ಮಗಳ ಹಿಂದೆಯೇ ಓಡುತ್ತಾಳೆ. ಫ್ಲಾಟ್‌ನ ಲಿಫ್ಟ್‌ನಲ್ಲಿ ಸುಖಾಸುಮ್ಮನೇ ಮೇಲೆ ಕೆಳಗೆ ಹೋಗುವ ಆಟವಾಡುತ್ತಿರುವ ಮಗುವನ್ನು ದಬಾಯಿಸಿ ಅಮ್ಮ ಮನೆಯೊಳಗೆ ಕರೆತರುತ್ತಾಳೆ. ಕಾರ್ ಪಾರ್ಕಿಂಗ್‌ನಲ್ಲಿ ಆಡ್ಕೊಳ್ತೀವಿ ಎಂದರೆ ಅಮ್ಮನ ಅನುಮತಿ ಇಲ್ಲ. ಇದ್ದರೂ ಆಕೆ ಧಿಮ್ಮನೇ ಪಾರ್ಕಿಂಗ್‌ನಲ್ಲಿ ಕುಳಿತಿದ್ದಾಗ ಮಾತ್ರ ಆಟವಾಡಲು ಅವಕಾಶ. ಅಷ್ಟೇ ಏಕೆ, ಬಸ್ಸಿನಲ್ಲಿ ಸೀಟು ಅಡ್ಜಸ್ಟ್ ಮಾಡಿಕೊಂಡು ಕುಳಿತುಕೊಳ್ಳಲೂ ಅಪ್ಪಣೆ ಇಲ್ಲ ಎಂಬಷ್ಟು ಈ ಅಮ್ಮ ಒದ್ದಾಡುತ್ತಿರುತ್ತಾಳೆ. ಉಸಿರುಗಟ್ಟಿಸುವ ಕಾಳಜಿ ಎನಿಸಿದರೂ, ಅಮ್ಮನ ಮನಸ್ಸಿನಲ್ಲಿರುವ ಆತಂಕಕ್ಕೆ ಕಾರಣವಿಲ್ಲದಿಲ್ಲ. ಆದರೆ ಈ ಬ್ಯಾಡ್ ಟಚ್ ಮಾಡುವವರಾದರೂ ಯಾರು? ಅವರಲ್ಲಿ ಬಹುತೇಕರು ಅಪ್ಪ ಅಥವಾ ಅಮ್ಮನ ಪಟ್ಟವನ್ನು ಅಲಂಕರಿಸಿದ ವ್ಯಕ್ತಿಗಳು, ಯಾವುದೋ ಅಮ್ಮನ ಮಗ, ಮಗಳೋ ಆಗಿರುವವರೇ. ಅವರ ಮನಸ್ಸಿನಲ್ಲಿ ವಿಕೃತಿಯೊಂದು ಹೇಗೆ ರೂಪುಗೊಳ್ಳುವುದೋ ಹೇಳುವುದು ಕಷ್ಟ. ಆದರೆ ಅಂತಹ ವಿಕೃತಿಗಳು ಸಲ್ಲದು ಎಂದು ಹೇಳುವ ಪ್ರಯತ್ನಗಳೇ ನಮ್ಮ ನಡುವೆ ಇಲ್ಲ ಎಂಬಷ್ಟು ಕಡಿಮೆ. ಹೆಂಗಸರೊಡನೆ ಗೌರವದಿಂದ ವರ್ತಿಸಬೇಕು, ಶಿಕ್ಷಕರೊಡನೆ ವಿಧೇಯತೆಯಿಂದ ಇರಬೇಕು, ಹಿರಿಯರೊಡನೆ ವಿನಯದಿಂದ ನಡೆದುಕೊಳ್ಳಬೇಕು ಎಂಬೆಲ್ಲ ಬುದ್ಧಿಮಾತುಗಳನ್ನು ಕೇಳುತ್ತಿರುತ್ತೇವೆ. ಆದರೆ ಮಕ್ಕಳೊಡನೆ ಸೌಜನ್ಯದಿಂದ ಹೇಗೆ ವರ್ತಿಸಬೇಕು, ಅವರನ್ನು ಎತ್ತಿಕೊಳ್ಳುವ ಸಂದರ್ಭ ಬಂದಾಗ ಹೇಗೆ ವರ್ತಿಸಬೇಕು, ಮಗುವನ್ನು ಮುದ್ದಿಸುವ ವಿಧಾನ ಯಾವುದು, ಅವರಿಗೆ ಚಾಕೊಲೇಟ್ ಕೊಡಬಹುದೇ ಬಾರದೇ? ಅವರೊಡನೆ ಮಾತು ಹೇಗಿರಬೇಕು, ಅವರ ವೈಯಕ್ತಿಕ ವಿಚಾರವನ್ನು ಗೌರವಿಸುವ ವಿಧಾನ ಯಾವುದು ಎಂಬೆಲ್ಲ ಪಾಠಗಳನ್ನು ಕಲಿಯುವುದಕ್ಕೆ ನಮ್ಮ ಸಮಾಜದಲ್ಲಿ ಸ್ಪೇಸ್ ಇಲ್ಲ.

ಮಕ್ಕಳಿಗೆ ಶಿಕ್ಷಣದ ಹಕ್ಕು ನೀಡುವುದು, ದುಡಿಮೆಯಿಂದ ಪುಟಾಣಿಗಳನ್ನು ದೂರ ಇಡುವುದು, ಬಾಲ್ಯವಿವಾಹ ನಡೆಯದಂತೆ ನೋಡಿಕೊಳ್ಳುವುದು ಮುಂತಾಗಿ ಅನೇಕ ರೀತಿಯಲ್ಲಿ ಮಕ್ಕಳ ಪರವಾದ ಕಾನೂನುಗಳು ಕೆಲಸ ಮಾಡುತ್ತವೆ. ಅದೇ ಮಾದರಿಯಲ್ಲಿ ಮಕ್ಕಳೊಡನೆ ಹೇಗೆ ವರ್ತಿಸಬೇಕು ಎಂಬ ಬಗ್ಗೆಯೂ ದೊಡ್ಡವರಿಗೆ ಪಾಠ ಹೇಳುವುದಕ್ಕೆ ಅವಕಾಶವೊಂದನ್ನು ಸೃಷ್ಟಿಸಬೇಕಾಗಿದೆ. ಅಂತಹ ಅವಕಾಶವೊಂದು ಲಭ್ಯವಿದ್ದರೆ, ಮಕ್ಕಳಿಗೆ ಸಂಬಂಧಿಸಿದಂತೆ ನಡೆಯುವ ಎಷ್ಟೋ ಅಪರಾಧಗಳು ಕಡಿಮೆಯಾಗಬಹುದೇನೋ. ಪೇರೆಂಟಿಂಗ್ ಕೇವಲ ಹೆತ್ತ ಅಮ್ಮನಿಗೆ ಮಾತ್ರ ಸೀಮಿತವಾದ ವಿಚಾರವಲ್ಲ. ■